## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s Gamesa Wind Turbine Private Limited ಕಂಪನಿಯ ಹೆಸರನ್ನು M/s Gamesa Renewable Private Limited ಎಂದು ಬದಲಾಯಿಸುವುದು ಮತ್ತು ಸದರಿ ಕಂಪನಿಗೆ ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ್ ಗ್ರಾಮದ ಪ್ರದೇಶಗಳಲ್ಲಿ ಹಂಚಿಕೆಯಾಗಿದ್ದ 14.45 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 150 ಮೆ.ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ, ಅನುಷ್ಠಾನಕ್ಕೆ ಕಾಲಾವಧಿ ವಿಸ್ತರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 114 ಎನ್‌ಸಿಇ 2011 ದಿ:12.09.2011.
2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಏಕ ಕಡತ ಸಂಖ್ಯೆ : KRED/08/GWTPL – (10.20+14.45 MW/2011/G-817.

* * *

<u>ಪ್ರಸ್ತಾವನೆ:-</u>

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ M/s Gamesa Wind Turbines Private Limited ಕಂಪನಿಗೆ ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ್ ಗ್ರಾಮದ ಪ್ರದೇಶಗಳಲ್ಲಿ 14.45 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಏಕ ಕಡತ ಪದ್ಧತಿಯಡಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು Government of India, Ministry of corporate affairs, Registrar of companies, chennai ಇವರ ಪ್ರಮಾಣ ಪತ್ರದಲ್ಲಿ M/s Gamesa Wind Turbines Private Limited ಕಂಪನಿಯ ಹೆಸರನ್ನು M/s Gamesa Renewable Private Limited ಎಂದು ಹೆಸರು ಬದಲಾವಣೆಮಾಡಿದ್ದು, ಸದರಿ ದಾಖಲೆಗಳನ್ವಯ ಎರಡೂ ಕಂಪನಿಗಳ CIN No. U74991TN2006PTC079179 ಒಂದೇ ಆಗಿದ್ದು, ಅದರಂತೆ ನಿಯಮಾನುಸಾರ ಹೆಸರು ಬದಲಾವಣೆ ಶುಲ್ಕವಾದ ರೂ.1,65,453/-ಗಳನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸಿರುವುದರಿಂದ, M/s Gamesa Wind Turbines Private Limited ಕಂಪನಿಯ ಹೆಸರನ್ನು M/s Gamesa Renewable Private Limited ಎಂದು ಬದಲಾಯಿಸಲು ಕೋರಿರುತ್ತಾರೆ.

ಅದೇರೀತಿ M/s Gamesa Wind Turbines Private Limited (ಕಂಪನಿಯ ಹೊಸ ಹೆಸರು M/s Gamesa Renewable Private Limited) ಕಂಪನಿಗೆ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ್ ಗ್ರಾಮದ ಪ್ರದೇಶಗಳಲ್ಲಿ ಈಗಾಗಲೇ ಹಂಚಿಕೆಯಾಗಿರುವ 14.45 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 150 ಮೆ.ವ್ಯಾ.ಗೆ ಹೆಚ್ಚಿಸುವ ಬಗ್ಗೆ ಅಭಿವೃದ್ಧಿದಾರರು ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಿದ್ದು, ಹೆಚ್ಚಳಗೊಳ್ಳಲಿರುವ 150 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈಗಾಗಲೇ ಹಂಚಿಕೆಯಾಗಿರುವ 14.45 ಮೆ.ವ್ಯಾ. ಸ್ಥಳದಲ್ಲಿಯೇ ಅನುಷ್ಠಾನಗೊಳಿಸುವುದಾಗಿ ತಿಳಿಸಿ, ಸಾಮರ್ಥ್ಯ ಹೆಚ್ಚಳಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಶುಲ್ಕಗಳನ್ನು ಕೆ.ಆರ್.ಇ.ಡಿ.ಎಲ್.,ಗೆ ಪಾವತಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ M/s Gamesa Wind Turbines Private Limited ಕಂಪನಿಯ ಹೆಸರನ್ನು M/s Gamesa Renewable Private Limited ಎಂದು ಹೆಸರು ಬದಲಾವಣೆ ಮಾಡಿ, ಸದರಿ ಕಂಪನಿಗೆ ಧಾರವಾಡ ಜಿಲ್ಲೆಯ, ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ್ ಗ್ರಾಮದಲ್ಲಿ ಹಂಚಿಕೆಯಾಗಿರುವ 14.45 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 150 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

---2)

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, Government of India, Ministry of corporate affairs, Registrar of companies, chennai ಇವರ ದಿನಾಂಕ: 31.07.2015 ರ ಪ್ರಮಾಣ ಪತ್ರದಲ್ಲಿ M/s Gamesa Wind Turbines Private Limited ಕಂಪನಿಯ ಹೆಸರನ್ನು M/s Gamesa Renewable Private Limited ಎಂದು ಹೆಸರು ಬದಲಾವಣೆ ಮಾಡಿರುವುದನ್ನು ಪರಿಗಣಿಸಿ, ಅಭಿವೃದ್ಧಿದಾರರ ಕೋರಿಕೆಯಂತೆ M/s Gamesa Wind Turbines Private Limited ಕಂಪನಿಯ ಹೆಸರನ್ನು M/s Gamesa Renewable Private Limited ಎಂದು ಬದಲಾಯಿಸಿ, ಈ ಕಂಪನಿಗೆ ಸರ್ಕಾರದ ಆದೇಶ ಸಂಖ್ಯೆ : ಇಎನ್ 114 ಎನ್‌ಸಿಇ 2011, ದಿನಾಂಕ :12.09.2011 ರಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ್ ಗ್ರಾಮದ ಪ್ರದೇಶಗಳಲ್ಲಿ ಹಂಚಿಕೆಯಾಗಿದ್ದ 14.45 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 150 ಮೆ.ವ್ಯಾಟ್.ಗೆ ಹೆಚ್ಚಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 104 ಎನ್‌ಸಿಇ 2016,**
**ಬೆಂಗಳೂರು, ದಿನಾಂಕ:10.06.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು, ಸರ್ಕಾರದ ಆದೇಶ ಸಂಖ್ಯೆ : ಇಎನ್ 114 ಎನ್‌ಸಿಇ 2011, ದಿನಾಂಕ :12.09.2011 ರಲ್ಲಿ M/s Gamesa Wind Turbine Private Limited ಕಂಪನಿಗೆ ಹಂಚಿಕೆ ಮಾಡಿದ್ದ 14.45 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹೆಸರನ್ನು ಇನ್ನು ಮುಂದೆ M/s Gamesa Renewable Private Limited ಕಂಪನಿ ಎಂದು ಹೆಸರು ಬದಲಾಯಿಸಲು ಸಹಮತಿಸಿದೆ.

ಅದೇ ರೀತಿ, M/s Gamesa Renewable Private Limited ಕಂಪನಿಗೆ ಧಾರವಾಡ ಜಿಲ್ಲೆಯ, ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ್ ಗ್ರಾಮದ ಪ್ರದೇಶಗಳಲ್ಲಿ ಹಂಚಿಕೆಯಾಗಿರುವ 14.45 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 150 ಮೆ.ವ್ಯಾ. ಸಾಮರ್ಥ್ಯಕ್ಕೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಹೆಚ್ಚಿಸಿ ಆದೇಶಿಸಲಾಗಿದೆ.

**The geographical area description of 150 Wind power project is detailed as below :-**

| Geographical Area details | Near by villages of the proposed area & District | Sanctioned capacity in MW | Enhancement proposed in Stage-I | Total capacity including enhancement |
|---|---|---|---|---|
| The area is spread Baradvad and West of Kolivad and east of Nalvadi village. In the west of the proposed area the Doddahalla stream runs diagonally in the entire proposed area and another stream also runs in N-E direction above Kolivad village. Further, the area has presence of powerlines and water bodies. Further, it appears that the area would be having agricultural activities. The elevation of the area vary from 606 to 628m and the area is held in the following Geographical Co-ordinates as per the GO issued for 14.45 MW vide No:EN 14 NCE 2011 dt:12.09.2011.<br>Latitude: $15^0 15'0"$ - $15^0 26'0"$N<br>Longitude: $75^0 19'49"$ - $75^0 26'06$ E<br>Ridge peaks: 609, 625, 615, 606, 612, 616, 628, 629m Amsl<br>Toposheet No. 48 M/7 | Kolivad village in Hubli Taluk, Dharwad District | 14.45 MW (17 Nosx850 kW) | 135.55 MW | 150 MW (75 Nos x 2000 kW) |

(H.K.) ---3)

ಷರತ್ತು ಮತ್ತು ನಿಬಂಧನೆಗಳು

1. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 2011 ದಿನಾಂಕ : 06.1.2012 ರನ್ವಯ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಅಭಿವೃದ್ಧಿದಾರರು ಮೂಲ ಆದೇಶದಲ್ಲಿ ಹಂಚಿಕೆಯಾಗಿರುವ 14.45 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ನಿಯಮಾನುಸಾರ ಕಾಲಾವಧಿ ವಿಸ್ತರಣಾ ಶುಲ್ಕ ಪಾವತಿಸುವ ಷರತ್ತಿನೊಂದಿಗೆ, ಹೆಚ್ಚಳಗೊಂಡ ಸಾಮರ್ಥ್ಯವು ಸೇರಿ ಒಟ್ಟು 150 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 3 ವರ್ಷಗಳ ಅವಧಿಯೊಳಗೆ ಅನುಷ್ಠಾನಗೊಳಿತಕ್ಕದ್ದು.
3. ಅಭಿವೃದ್ಧಿದಾರರು ಮೂಲ ಆದೇಶದಲ್ಲಿ ಹಂಚಿಕೆಯಾಗಿದ್ದ 14.45 ಮೆ.ವ್ಯಾ. ಸಾಮರ್ಥ್ಯದ ಯೋಜನಾ ಪ್ರದೇಶದಲ್ಲಿಯೇ, ಅಂದರೆ, ಆದೇ ಭೌಗೋಳಿಕ ಪ್ರದೇಶದಲ್ಲಿಯೇ ಹೆಚ್ಚಳಗೊಂಡಿರುವ ಸಾಮರ್ಥ್ಯವನ್ನು ಸಹ ಅನುಷ್ಠಾನಗೊಳಿಸತಕ್ಕದ್ದು.
4. ಅಭಿವೃದ್ಧಿದಾರರು ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ತನ್ನು ಮಾರಾಟ ಮಾಡುವ ಕುರಿತು ಯೋಜನಾ ಅನುಷ್ಠಾನ ಪ್ರದೇಶದಲ್ಲಿನ ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಯೊಂದಿಗೆಯೇ ವಿದ್ಯುತ್ ಖರೀದಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ಮತ್ತು ಕೆ.ಪಿ.ಟಿ.ಸಿ.ಎಲ್.ನೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆಯನ್ನು ಮಾಡಿಕೊಳ್ಳಲು ಹಾಗೂ ಸ್ವಂತ ಬಳಕೆ ಮಾಡಿಕೊಳ್ಳಲು / ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಅನುಮತಿಸಲಾಗಿದೆ.
5. ಸದರಿ ಕಂಪನಿಯವರು ಯೋಜನೆಗೆ ಸಂಬಂಧಿಸಿದಂತೆ ಬಾಕಿ ಇರುವ ಡಿಪಿಆರ್ ಮೊತ್ತ ಹಾಗೂ ಇನ್ನಿತರೆ ಯಾವುದೇ ರೀತಿಯ ಶುಲ್ಕಗಳನ್ನು ಒಡಂಬಡಿಕೆ ಮಾಡಿಕೊಳ್ಳುವ ಮುನ್ನ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಂದಾಯ ಮಾಡತಕ್ಕದ್ದು.
6. ಕರ್ನಾಟಕ ಭೂಸುಧಾರಣ ಕಾಯ್ದೆ 1961 ಕಲಂ 109 ರಡಿ ಕಂದಾಯ ಇಲಾಖೆಯಿಂದ ಅನುಮತಿ ಪಡೆದುಕೊಂಡು ಭೂಪರಿವರ್ತನೆಯಾದ ನಂತರವೇ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳತಕ್ಕದ್ದು.
7. ಈ ಯೋಜನೆಗೆ ಸರ್ಕಾರದ ಕೈಗಾರಿಕ ನೀತಿ 2014-19 ರನ್ವಯ ಅನ್ವಯಿಸುವ ಸವಲತ್ತುಗಳು ಅನ್ವಯವಾಗುತ್ತವೆ.
8. ಈ ಆದೇಶವನ್ನು ರದ್ದು ಪಡಿಸುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
9. ಉಳಿದಂತೆ ಸರ್ಕಾರದ ಮೂಲ ಹಂಚಿಕೆ ಆದೇಶ ಸಂಖ್ಯೆ: ಇಎನ್ 114 ಎನ್‌ಸಿಇ 2011 ದಿನಾಂಕ:12.09.201 ರಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ಎ.ಚಪ್ಪರಬಂದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

10.06

ಇವರಿಗೆ:

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಣೆಗಾಗಿ.

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಎ & ಇ) ರವರ ಕಾರ್ಯದರ್ಶಿ, ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.

4)

2 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

3 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.

4 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.

5 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ,ಬೆಂಗಳೂರು-1.

6 ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ

7 ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ, ಧಾರವಾಡ.

8 ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ಪ್ರಾದೇಶಿಕ ವಿಭಾಗ, ಧಾರವಾಡ

9 ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

10 M/s Gamesa Renewable Private Limited., No. 24, Saraogi Mansion, 2nd Cross, Nehru Nagar, Sheshadripuram,Banglaroe-560 020.

11 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.

12 ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.

13 ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.